ದಿಃ 16.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಎನ್.ಎಸ್.ಜೆ., ವಕೀಲರಿಂದ ವಾದಿ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ನ್ಯಾಯಾಲಯದಿಂದ ಸಮನ್ಸ್ ಬಂದ ಮೇರೆಗೆ ನಾನು ಡಿ.ಎನ್. ಜಯಮ್ಮ ರವರು ಬರೆದ ವೀಲು ನಾಮೆಯ ಬಗ್ಗೆ ಸಾಕ್ಷಿ ನುಡಿಯಲು ಬಂದಿದ್ದೇನೆ. ಡಿ.ಎನ್. ಜಯಮ್ಮ ರವರು ದಿಃ 10.12.2016 ರಂದು ವೀಲು ನಾಮೆಯನ್ನು ಆಕೆಯ ಮಗ ಎಂ.ಎನ್. ನಿರಂಜನ ಎಂಬುವವರಿಗೆ ಬರೆದುಕೊಟ್ಟಿದ್ದರು. ಸದರಿ ವೀಲು ನಾಮೆಯನ್ನು ಪೂರ್ಣೇಶ್ ಮೂರ್ತಿ ಎಂ.ಆರ್ ರವರು ತಯಾರಿಸಿದ್ದರು. ಸದರಿ ವೀಲು ನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಡಿ.2 ಎಂದು ಗುರುತಿಸಲಾಗಿದ್ದು, ಸದರಿ ವೀಲು ನಾಮೆಯಲ್ಲಿ ಇರುವ ಪೂರ್ಣೇಶ್ ಮೂರ್ತಿ ಎಂ.ಆರ್ ಸಹಿಯನ್ನು ನೊಡೀ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಡಿ.2(ಎ) ಎಂದು ಗುರುತಿಸಲಾಗಿರುತ್ತದೆ. ಜಯಮ್ಮ ರವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಡಿ.2(ಬಿ) ಎಂದು ಗುರುತಿಸಲಾಗಿರುತ್ತದೆ. ಸದರಿ ದಾಖಲೆಗೆ ಸಾಕ್ಷಿದಾರರಾಗಿ ಬಿ. ಶಿವಾನಂದ ಮತ್ತು ನಾನು ಸಹಿ ಮಾಡಿದ್ದೇವೆ ಎಂದು ಸಾಕ್ಷಿ ಸಹಿಗಳನ್ನು ಗುರುತಿಸಿದ್ದು ಆ ಸಹಿಗಳನ್ನು ಈಗಾಗಲೇ ನಿ.ಡಿ.2(ಸಿ) ಮತ್ತು ನಿ.ಡಿ.2(ಡಿ) ಎಂದು ಗುರುತಿಸಲಾಗಿರುತ್ತದೆ.

ಪಾಟೀ ಸವಾಲು ಶ್ರೀ ಕೆ.ಎಸ್.ಎ ವಕೀಲರಿಂದ ವಾದಿ ಪರವಾಗಿ

3. ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ದಿಃ 12.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು ಶ್ರೀ ಕೆ.ಎಸ್.ಎ ವಕೀಲರಿಂದ ವಾದಿ ಪರವಾಗಿ

4. ನನ್ನ ಮೂಲ ಊರು ಮೂಡಿಗೆರೆ ತಾಲ್ಲೂಕಿನ ಮೂಡಸಸಿ ಗ್ರಾಮ ಆಗಿರುತ್ತದೆ. ಸದರಿ ಗ್ರಾಮ ಮೂಡಿಗೆರೆಯಿಂದ 15 ಕಿ.ಮೀ ಅಂತರದಲ್ಲಿ ಇದೆ. ನನ್ನ ಜಮೀನುಗಳು ಅಂಗಡಿ ಗ್ರಾಮದಲ್ಲಿ ಇರುತ್ತವೆ. ಅಂಗಡಿ ಗ್ರಾಮ ಮೂಡಿಗೆರೆಯಿಂದ 18 ಕಿ.ಮೀ ಅಂತರದಲ್ಲಿ ಇದೆ. ಅಂಗಡಿ ಗ್ರಾಮದಲ್ಲಿ ವಾಸದ ಮನೆ ಇಲ್ಲ. ಅಂಗಡಿ ಗ್ರಾಮದಲ್ಲಿ ಜಮೀನನ್ನು ಖರೀದಿಸಿ 30 ವರ್ಷ ಕಳೆದಿದೆ. ಅಂಗಡಿ ಗ್ರಾಮದಲ್ಲಿ ನಾವು ಎಂದಿಗೂ ವಾಸವಿಲ್ಲ, ಮೂಡಿಗೆರೆಯಲ್ಲಿ ನಾವು ವಾಸವಿರುತ್ತೇವೆ. ಈ ಕೇಸಿನಲ್ಲಿ ಸಾಕ್ಷಿ ಹೇಳಿದ D.W.2 ಪೂರ್ಣೇಶ್, D.W.1 ಹೇಮಾವತಿ ಮತ್ತು ನಾನು ಒಂದೇ ಜಾತಿಗೆ ಸೇರಿದ್ದೇವೆ ಎಂದರೆ ಸರಿ. ನಾನು ಮೂಡಿಗೆರೆಯ ವೀರಶೈವ ಸಂಘದ ಪದಾಧಿಕಾರಿಯಾಗಿದ್ದೇನೆ ಎಂದರೆ ಸರಿ. D.W.2 ಪೂರ್ಣೇಶ್ ರವರು ರಾಜ್ಯ ವೀರಶೈವ ಸಂಘದ ಪದಾಧಿಕಾರಿಯಾಗಿದ್ದಾರೆ ಎಂದರೆ ಸರಿ. ನಾನು ಮತ್ತು D.W.2 ಪೂರ್ಣೇಶ್ ರವರು ಅನೋನ್ಯವಾಗಿ ಇದ್ದೇವೆ ಎಂದರೆ ಸರಿಯಲ್ಲ.

5. ಪ್ರತಿವಾದಿ ನಂಬರ್ 1(ಎ) ನನಗೆ ಇತ್ತೀಚೆಗೆ ಪರಿಚಯ ಆಗಿದ್ದರು. ನನಗೂ ಮತ್ತು ಪ್ರತಿವಾದಿ ನಂಬರ್ 1(ಎ) ಗೆ ಒಬ್ಬರೇ ವಕೀಲರು ಎಂದರೆ ಸರಿ. ನಿ.ಡಿ.2 ವೀಲು ನಾಮೆ ಆದಾಗ ಜಯಮ್ಮ ರವರಿಗೆ ಸುಮಾರು 75 ವರ್ಷ ವಯಸ್ಸು ಆಗಿತ್ತು. D.W.2 ಪೂರ್ಣೇಶ್ ನನಗೆ ಇತ್ತೀಚೆಗೆ ಪರಿಚಯ ಆಗಿರುತ್ತಾರೆ. ನಾನು ನನ್ನ ತಾಯಿಯ ಜಮೀನಿನ ಜಿ.ಪಿ.ಎ ಧಾರನಾಗಿರುತ್ತೇನೆ ಎಂದರೆ ಸರಿ. ನಮ್ಮ ಜಮೀನು ಗೋಣಿಬೀಡು ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಸರಿ. D.W.2 ಪೂರ್ಣೇಶ್ ರವರು ಗೋಣಿಬೀಡು ವ್ಯಾಪ್ತಿಯಲ್ಲಿ ಕಂದಾಯ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. D.W.2 ಪೂರ್ಣೇಶ್ ರವರು ವೀರಶೈವ ಸಂಘದ ಪದಾಧಿಕಾರಿಯಾದ ಕಾರಣ ಪರಿಚಯ ಆಗಿದ್ದರು. D.W.2 ಪೂರ್ಣೇಶ್ ರವರು ಏನು ವೃತ್ತಿ ಮಾಡಿಕೊಂಡಿದ್ದರು ಎಂದು ನನಗೆ ಮಾಹಿತಿ

ಇಲ್ಲ. D.W.2 ಪೂರ್ಣೇಶ್ ರವರ ಮಗನ ಪರಿಚಯ ನನಗೆ ಇತ್ತೀಚೆಗೆ ಆಗಿರುತ್ತದೆ. D.W.2 ಪೂರ್ಣೇಶ್ ಮತ್ತು ಅವರ ಮಗ ಏನು ವೃತ್ತಿ ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ವಾಸವಿರುವ ಮನೆಯಲ್ಲಿ D.W.2 ಪೂರ್ಣೇಶ್ ರವರ ಮನೆ 1 ½ ಕಿ.ಮೀ ಅಂತರದಲ್ಲಿ ಇದೆ. D.W.2 ಪೂರ್ಣೇಶ್ ರವರ ಮನೆಗೆ ನಾನು ಹೋಗುವುದಿಲ್ಲ. D.W.2 ಪೂರ್ಣೇಶ್ ರವರಿಗೆ ಎಷ್ಟು ಜನ ಮಕ್ಕಳು ಇದ್ದಾರೆ ಮತ್ತು ಅವರ ಕುಟುಂಬದ ವಿವರ ನನಗೆ ಗೊತ್ತಿಲ್ಲ. D.W.2 ಪೂರ್ಣೇಶ್ ರವರೊಂದಿಗೆ ಶಾಮೀಲ್ ಆಗಿ ನಾವು ನಿ.ಡಿ.2 ವೀಲು ನಾಮೆಯನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಆ ಕಾರಣದಿಂದಲೇ D.W.2 ಪೂರ್ಣೇಶ್ ರವರ ಕುಟುಂಬದ ಬಗ್ಗೆ ಮತ್ತು ವೃತ್ತಿಯ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರು ಸಹ ತಿಳಿದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. D.W.2 ಪೂರ್ಣೇಶ್ ರವರು ಅಕ್ರಮವಾಗಿ ಲಂಚ ಪಡೆದು ದಾಖಲೆಯನ್ನು ಸೃಷ್ಟಿಸಿದ್ದಾರೆ ಎಂದು ಜಿಲ್ಲಾ ನ್ಯಾಯಾಲಯದಲ್ಲಿ ಲಂಚ ಪ್ರಕರಣ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕರಣದಲ್ಲಿ ನಾನು ಅವರಿಗೆ ಜಾಮೀನು ನಿಂತು ಸಹಾಯ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಆ ಪ್ರಕರಣದಲ್ಲಿ D.W.2 ಪೂರ್ಣೇಶ್ ರವರಿಗೆ ಶಿಕ್ಷೆಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

7. ಜಯಮ್ಮ ರವರು ತಮಗೆ 3 ಜನ ಮಕ್ಕಳು ಎಂದು ದಿಃ 10.12.2016 ರಲ್ಲಿ ತಿಳಿಸಿದ್ದರು. ದಿಃ 10.12.2016 ಕ್ಕೂ ಮೊದಲು ಜಯಮ್ಮ ರವರು ನನಗೆ ಅಷ್ಟು ಪರಿಚಯ ಇರಲಿಲ್ಲ. ಜಯಮ್ಮ ರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಆಗ ತಿಳಿದಿಲ್ಲ. ಜಯಮ್ಮ ರವರು ಯಾರ ಜೊತೆ ವಾಸವಾಗಿದ್ದಾರೆ ಎಂದು ನಾನು ತಿಳಿದುಕೊಂಡಿರಲಿಲ್ಲ. ಜಯಮ್ಮ ರವರ ಮಕ್ಕಳು ಎಲ್ಲಿ ವಾಸವಾಗಿದ್ದಾರೆ ಎಂದು ನನಗೆ ತಿಳಿದಿರಲಿಲ್ಲ. ಜಯಮ್ಮ ರವರ ಮನೆ 2 ಪೋರ್ಷನ್ ಇದ್ದವು ಎಂದು ನನಗೆ ಆ ದಿನ ತಿಳಿದು ಬಂತು. ಇನ್ನೊಂದು ಮನೆಯಲ್ಲಿ ಯಾರು ವಾಸವಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ನಾನು ಆ ಇನ್ನೊಂದು ಮನೆಯಲ್ಲಿ ಯಾರು ವಾಸವಿದ್ದಾರೆ ಎಂದು ಜಯಮ್ಮ ರವರನ್ನು

ವಿಚಾರಿಸಲಿಲ್ಲ. ಅದೇ ದಿನ ಮೊದಲ ಬಾರಿಗೆ ಜಯಮ್ಮ ರವರ ಮನೆಗೆ ಹೋಗಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಜಯಮ್ಮ ರವರ ಮನೆಯಲ್ಲಿ ಎಷ್ಟು ರೂಮ್ ಗಳು ಇದ್ದವು ಎಂದು ನಾನು ನೋಡಲಿಲ್ಲ. ಜಯಮ್ಮ ರವರ ಹತ್ತಿರದ ಸಂಬಂಧಿಗಳು ಯಾರು ಇದ್ದಾರೆ ಎಂದು ನಾನು ತಿಳಿದುಕೊಳ್ಳಲಿಲ್ಲ.

8. ಜಯಮ್ಮನ ತಮ್ಮನ ಮಕ್ಕಳಾದ ಪ್ರೇಮಚಂದ್ರ ಮತ್ತು ಇನ್ನೊಬ್ಬ ಸತೀಶ ಎಂದು ಗೊತ್ತಾ ಎಂದರೆ ಸಾಕ್ಷಿ ಪ್ರೇಮಚಂದ್ರ ಜಯಮ್ಮ ರವರ ತಮ್ಮನ ಮಗ ಎಂದು ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಸತೀಶ್ ರವರು ಶ್ರೀಕಂಠ ಸ್ವಾಮಿ ರವರ ಮಗ ಎಂದು ಗೊತ್ತು. ಪ್ರೇಮಚಂದ್ರ ಮತ್ತು ಸತೀಶ್ ರವರ ಮನೆ ಜಯಮ್ಮ ರವರ ಮನೆಯಿಂದ 100 ಅಡಿ ಅಂತರದಲ್ಲಿ ಇದೆ. ಪ್ರೇಮಚಂದ್ರ ಮತ್ತು ಸತೀಶ್ ನಿ.ಡಿ.2 ವೀಲು ನಾಮೆ ಆಗುವ ಸಮಯದಲ್ಲಿ ಬಂದಿರಲಿಲ್ಲ. ವೀಲು ನಾಮೆ ಬರೆಯುವಾಗ ಬೆಳಿಗ್ಗೆ 11.00 ಗಂಟೆ ಆಗಿತ್ತು. ವೀಲು ನಾಮೆಯನ್ನು 10.45 ಕ್ಕೆ ಬರೆಯಲು ಆರಂಭಿಸಿ 11.00 ಗಂಟೆಗೆ ಮುಗಿಯಿತು. ವೀಲು ನಾಮೆಯನ್ನು ಬರೆಯಬೇಕು ಎಂಬ ವಿಚಾರವನ್ನು ನಿಮಗೆ ಯಾರು ತಿಳಿಸಿದ್ದರು ಎಂದರೆ ಸಾಕ್ಷಿ ಜಯಮ್ಮ ರವರು ಒಬ್ಬ ವ್ಯಕ್ತಿಯನ್ನು ನಮ್ಮ ಮನೆಗೆ ಕಳುಹಿಸಿದ್ದರು, ಅವರ ಹೆಸರು ನನಗೆ ಗೊತ್ತಿಲ್ಲ. ಆ ವ್ಯಕ್ತಿ ನಮ್ಮ ಮನೆಗೆ ಬಂದು ಹೇಳಿ ಹೋಗಿದ್ದರು, ಆ ಸಮಯದಲ್ಲಿ ನಾನು ಮನೆಯಲ್ಲಿ ಇರಲಿಲ್ಲ. ಆ ವ್ಯಕ್ತಿ ಬಂದು ಹೋದ ಬಳಿಕ ನಾನು ಜಯಮ್ಮ ರವರ ಮನೆಗೆ ಹೋಗಿ ಯಾವ ವಿಚಾರಕ್ಕೆ ಹೇಳಿ ಕಳುಹಿಸಿದ್ದೀರಿ ಎಂದು ವಿಚಾರಿಸಲಿಲ್ಲ.

9. ನಿ.ಡಿ.2 ಆದ ಒಂದು ದಿನದ ಮುಂಚೆ ಆ ವ್ಯಕ್ತಿ ಬಂದು ಮನೆಯಲ್ಲಿ ಆ ವಿಚಾರವನ್ನು ಹೇಳಿದ್ದ. ನಾನು ಮತ್ತು D.W.2 ಪೂರ್ಣೇಶ್ ರವರು ಆ ದಿನ ಜಯಮ್ಮ ರವರ ಮನೆಗೆ ಒಟ್ಟಿಗೆ ಹೋದೆವು. D.W.2 ಪೂರ್ಣೇಶ್ ರವರ ಮನೆ ಜಯಮ್ಮ ರವರ ಮನೆಯಿಂದ 200 ಮೀಟರ್ ಅಂತರದಲ್ಲಿ ಇದೆ. ನಾವು ಮನೆಗೆ ಹೋದ ನಂತರ ಬಿ.ಶಿವಾನಂದ್ ಎಂಬುವವರು ಬಂದರು. ಬಿ.ಶಿವಾನಂದ್ ರವರು ತಮ್ಮನ್ನು ಯಾರು ಬರುವಂತೆ ತಿಳಿಸಿದ್ದರು ಎಂದು ನನಗೆ ಹೇಳಲಿಲ್ಲ. ಬಿ.

ಶಿವಾನಂದ್ ಬರುವಷ್ಟರಲ್ಲಿ ಬರವಣಿಗೆ ಆಗಿರಲಿಲ್ಲ. ನಾವು ಹೋದ 5 ನಿಮಿಷದಲ್ಲಿ ಶಿವಾನಂದ್ ಅಲ್ಲಿಗೆ ಬಂದರು.

10. ಈ ದಾವೆಯಲ್ಲಿ ಪ್ರತಿವಾದಿಗಳು ಯಾರು ಯಾರು ಮತ್ತು ಎಷ್ಟು ಜನ ಎಂದು ನನಗೆ ಗೊತ್ತಿಲ್ಲ. ವಾದಿಯರು ಯಾರು ಎಷ್ಟು ಜನ ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯನ್ನು 2 ಸ್ವತ್ತುಗಳಿಗೆ ಸಂಬಂಧಿಸಿದಂತೆ ದಾಖಲಿಸಿದ್ದಾರೆ. ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ವಾದಿ ಮತ್ತು ಪ್ರತಿವಾದಿಗಳ ಬಗ್ಗೆ ಬರೆದಿದ್ದರಾ ಎಂದರೆ ಸಾಕ್ಷಿ ಜಯಮ್ಮ ರವರ ಮಕ್ಕಳ ಬಗ್ಗೆ ಬರೆಸಿದ್ದೇನೆ ಎಂದು ನುಡಿಯುತ್ತಾರೆ. ಆ ವಿಚಾರವನ್ನು ಜಯಮ್ಮ ರವರೇ ನನಗೆ ಹೇಳಿದ್ದರು. ಬೇರೆ ಯಾವಾ ವ್ಯಕ್ತಿಗಳ ಬಗ್ಗೆಯು ಪ್ರಮಾಣ ಪತ್ರದಲ್ಲಿ ಬರೆದಿಲ್ಲ.

11. ನಿ.ಡಿ.2 ರಲ್ಲಿ 2 ಆಸ್ತಿಗಳ ಬಗ್ಗೆ ಬರೆಯಲಾಗಿದೆ. ನಿ.ಡಿ.2 ಕ್ಕೆ ಸಹಿ ಹಾಕುವ ಮೊದಲು ನಾನು ಆ ದಾವೆಯನ್ನು ಓದಿದ್ದೆ. ನಿ.ಡಿ.2 ರಲ್ಲಿ 2 ಸ್ವತ್ತುಗಳ ಬಗ್ಗೆ ಮಾತ್ರ ಬರೆಯಲಾಗಿತ್ತು. ನಾನು ಒಂದು ಸಹಿಯನ್ನು ಮಾಡಿದ್ದೆ. ನಿ.ಡಿ.2 ಆದ ಬಳಿಕ ಆ ದಾಖಲೆಯನ್ನು ನಾನು ನಂತರ ನೋಡಿಲ್ಲ. ಸದರಿ ದಾಖಲೆಗೆ ಜಯಮ್ಮ ರವರು ಒಂದು ಕಡೆ ಸಹಿ ಮಾಡಿದ್ದು ನನಗೆ ನೆನಪಿದೆ. ನಿ.ಡಿ.2 ಒಂದು ಬಿಳಿ ಹಾಳೆಯ ಎರಡು ಕಡೆ ಇತ್ತು. ಜಯಮ್ಮ ರವರು ನಿ.ಡಿ.2 ರ ಕೊನೆಯ ಪುಟದಲ್ಲಿ ಮಾಡಿದ್ದರು. ಜಯಮ್ಮ ರವರು ನಾವು ಸಹಿ ಮಾಡುವ ಮೊದಲೇ ನಿ.ಡಿ.2 ಕ್ಕೆ ಸಹಿ ಮಾಡಿದ್ದರು. D.W.2 ಪೂರ್ಣೇಶ್ ರವರ ಮಗ ಮನೆಯಲ್ಲಿ ಕಾಫಿ ಕಚೇರಿಯನ್ನು ಹೊಂದಿದ್ದಾರೆ ಎಂದರೆ ಇರಬಹುದು. D.W.2 ಪೂರ್ಣೇಶ್ ರವರು ಸಹ ಕಂದಾಯ ಅಧಿಕಾರಿ ಆಗಿದ್ದ ಕಾರಣ ಮನೆಯಲ್ಲಿ ಕಚೇರಿಯನ್ನು ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. D.W.2 ಪೂರ್ಣೇಶ್ ರವರಿಗೆ ಜಯಮ್ಮ ರವರ ಮನೆಯಲ್ಲಿ ನಿ.ಡಿ.2 ಅನ್ನು ಬರೆಯಲು ಆಗುವುದಿಲ್ಲ, ನಿಮ್ಮ ಮನೆಯ ಕಚೇರಿಯಲ್ಲಿ ನಿ.ಡಿ.2 ಅನ್ನು ಬರೆಸಿರಿ ಎಂದು ನಾನು ಹೇಳಲಿಲ್ಲ.

12. ಜಯಮ್ಮ ರವರ ಮನೆಗೆ ಹೋಗುವವರೆಗೂ ನಾನು ಯಾವ ಕಾರಣಕ್ಕೆ ಅವರ ಮನೆಗೆ ಹೋಗುತ್ತಿದ್ದೇನೆ ಎಂದು ತಿಳಿದಿರಲಿಲ್ಲ. D.W.2 ಪೂರ್ಣೇಶ್

ರವರು ಸಹ ಜಯಮ್ಮ ರವರ ಮನೆಗೆ ಹೋಗುವಾಗ ಯಾವ ವಿಚಾರಕ್ಕೆ ಹೋಗುತ್ತಿದ್ದೇವೆ ಎಂದು ತಿಳಿಸಿರಲಿಲ್ಲ. ನಿ.ಡಿ.2 ಅನ್ನು ಬರೆಯಲು ಬಿಳಿ ಕಾಗದ ಜಯಮ್ಮ ರವರ ಮನೆಯಲ್ಲಿ ಇತ್ತು. ಒಂದೇ ಕಾಗದದಲ್ಲಿ ನಿ.ಡಿ.2 ಅನ್ನು ಬರೆಯಲಾಗಿತ್ತು. ನಿ.ಡಿ.2 ಒಂದೇ ಹಾಳೆ ಆಗಿತ್ತು, ಟಾನ್ ಶೀಟ್ ಆಗಿರಲಿಲ್ಲ. ನಿ.ಡಿ.2 ಅನ್ನು ಬರೆಯಲು ಪೆನ್ ಅನ್ನು ಜಯಮ್ಮ ರವರೇ ನೀಡಿದ್ದರು. ಲೆಡ್ ಪೆನ್ ಅನ್ನು ಜಯಮ್ಮ ರವರು ನೀಡಿದ್ದರು. ನಿ.ಡಿ.2 ಅನ್ನು ಬರೆಯುವಾಗ ಜಯಮ್ಮ ರವರು ಪಹಣಿ ಮತ್ತು ಪಟ್ಟಣ ಪಂಚಾಯಿತಿಗೆ ಸೇರಿದ ದಾಖಲೆಯನ್ನು ನೀಡಿದ್ದರು. ಹಳೆಯ ವೀಲು ನಾಮೆ ಮತ್ತು ಕ್ರಯ ಪತ್ರಗಳನ್ನು ಜಯಮ್ಮ ರವರು ನೀಡಲಿಲ್ಲ. ನಿ.ಡಿ.2 ರಲ್ಲಿ ಹಳೆಯ ವೀಲು ನಾಮೆ ಮತ್ತು ಕ್ರಯ ಪತ್ರಗಳ ಉಲ್ಲೇಖ ಇದೆಯಾ ಎಂದರೆ ನನಗೆ ಗೊತ್ತಿಲ್ಲ.

13. ಜಯಮ್ಮ ರವರು ಹೇಳುತ್ತಾ ಹೋದಂತೆ ನಿ.ಡಿ.2 ಅನ್ನು ಬರೆಯಲಾಗಿತು. ನಿ.ಡಿ.2 ಬರೆದು ಆದ ನಂತರ ನಾನು ಅದನ್ನು ಓದಿದೆ. ಜಯಮ್ಮ ರವರು ಹೇಳುತ್ತಾ ಹೋದಂತೆ ನಿ.ಡಿ.2 ಅನ್ನು ಬರೆದಿದ್ದರಿಂದ ನನಗೆ ನಂತರ ನಿ.ಡಿ.2 ಅನ್ನು ಓದುವ ಅಗತ್ಯ ಇರಲಿಲ್ಲ ಎಂದರೆ ಸಾಕ್ಷಿ ಸಹಿ ಹಾಕುವಾಗ ಓದಿದ್ದೆ ಎಂದು ನುಡಿಯುತ್ತಾರೇ. ನಿ.ಡಿ.2 ರಲ್ಲಿ ಜಯಮ್ಮ ರವರ ಹೆಣ್ಣು ಮಕ್ಕಳು ಎಲ್ಲಿ ವಾಸವಿದ್ದಾರೆ, ಅವರ ಗಂಡನ ಹೆಸರು ಬರೆದಿಲ್ಲ. ಜಯಮ್ಮ ರವರ ಹೆಣ್ಣು ಮಕ್ಕಳಿಗೆ ತರಿ ಜಮೀನು ಮಾರಾಟ ಮಾಡಿ ಹಣ ನೀಡಿದ್ದೇನೆ ಎಂದು ಬರೆಯಲಾಗಿದೆ. ನಿ.ಡಿ.2 ಅನ್ನು ಜಯಮ್ಮ ರವರು ನನ್ನ ಎದುರಿಗೆ ಹೇಳಿ ಬರೆಸಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿನ 1(ಎ) ಪ್ರತಿವಾದಿ ಹೇಮಾವತಿ ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು D.W.2 ಪೂರ್ಣೇಶ್ ಸೇರಿ ನಿ.ಡಿ.2 ಅನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

14. ಆ ದಿನ ನಾವು ಜಯಮ್ಮ ರವರ ಮನೆಯಲ್ಲಿ ಫಲಹಾರ, ಟೀಯನ್ನು ಕುಡಿಯಲಿಲ್ಲ. ಜಯಮ್ಮ ರವರಿಗೆ ನಾನು ಸಂಬಂಧಿಕನಲ್ಲ. ನಿ.ಡಿ.2 ಆದ ಬಳಿಕ 11 ಗಂಟೆಗೆ ನಾನು ಮತ್ತು ಉಳಿದವರು ಜಯಮ್ಮ ರವರ ಮನೆಯಿಂದ ಒಟ್ಟಿಗೆ

ಹೊರಟಿದ್ದೆವು. ನಿ.ಡಿ.2 ಆದ ಬಳಿಕ ಅದನ್ನು ಜಯಮ್ಮ ರವರೇ ಇಟ್ಟುಕೊಂಡರು. ನಿ.ಡಿ.2 ಅನ್ನು ಯಾರಿಗೆ ನೀಡಬೇಕು ಎಂದು D.W.2 ಪೂರ್ಣೇಶ್ ಜಯಮ್ಮ ರವರಿಗೆ ಹೇಳಲಿಲ್ಲ. ಜಯಮ್ಮ ರವರ ಪಕ್ಕದ ಇನ್ನೊಂದು ಭಾಗದಲ್ಲಿ ಯಾರು ವಾಸವಿದ್ದಾರೆ ಎಂದರೆ ಸಾಕ್ಷಿ ವಕೀಲರಾದ ನೀವೆ ವಾಸವಿದ್ದೀರಿ ಎಂದು ನುಡಿಯುತ್ತಾರೆ. ಜಯಮ್ಮ ರವರ ಮನೆಯ ಪಕ್ಕದ ಇನ್ನೊಂದು ದಿಕ್ಕಿನಲ್ಲಿ ಯಾರು ವಾಸವಿದ್ದರು ಎಂದು ನನಗೆ ಗೊತ್ತಿಲ್ಲ. ಆ ಮನೆ ಹಿಂದೆ ಜಯಮ್ಮ ರವರ ಕುಟುಂಬಕ್ಕೆ ಸೇರಿದ ಮನೆಯಾಗಿತ್ತು. ಜಯಮ್ಮ ರವರ ಮನೆಯ ಎದುರಿಗೆ ರಸ್ತೆ ಇರುತ್ತದೆ. ಜಯಮ್ಮ ರವರು ತಮ್ಮ ಅಕ್ಕ ಪಕ್ಕದ ಮನೆಯವರ ಜೊತೆ ಯಾವ ರೀತಿ ಇದ್ದರು ಎಂದು ನನಗೆ ಗೊತ್ತಿಲ್ಲ. ಜಯಮ್ಮ ರವರು ತಮ್ಮ ಅಕ್ಕ ಪಕ್ಕದ ಮನೆಯವರ ಜೊತೆ ಅನೋನ್ಯವಾಗಿದ್ದ ಕಾರಣ ವೀಲು ನಾಮೆ ಬರೆಸುವುದಿದ್ದರೆ ಅವರಿಗೆ ತಿಳಿಸುತ್ತಿದ್ದರು, ದೂರದವರಾದ ನಮ್ಮನ್ನು ಕರೆಸುವ ಅಗತ್ಯತೆ ಜಯಮ್ಮ ರವರಿಗೆ ಇರಲಿಲ್ಲ ಎಂದರೆ ಸರಿಯಲ್ಲ.

15. ಜಯಮ್ಮ ರವರು ನಿ.ಡಿ.2 ಬರೆಯುವಾಗ ನೀಡಿದ ದಾಖಲೆಯನ್ನು ನೋಡಿದ್ದೆ. ವೀಲು ನಾಮೆಯಲ್ಲಿ ಬರೆದ ಆಸ್ತಿಗಳ ಖಾತೆ ಜಯಮ್ಮ ರವರ ಹೆಸರಿನಲ್ಲಿ ಇದ್ದವು. ಆ ಆಸ್ತಿಗಳು ಜಯಮ್ಮ ರವರ ಹೆಸರಿಗೆ ಯಾವ ರೀತಿ ಬಂದವು ಎಂದು ನಾನು ವಿಚಾರಿಸಲಿಲ್ಲ. ನಿ.ಡಿ.2 ಆಗುವ ಮೊದಲು ಮತ್ತು ನಂತರ ಜಯಮ್ಮ ರವರ ಆರೋಗ್ಯದ ಬಗ್ಗೆ ಮತ್ತು ಅವರ ಕುಟುಂಬಸ್ಥರ ಬಗ್ಗೆ ವಿಚಾರಿಸಲಿಲ್ಲ. ಜಯಮ್ಮ ರವರ ಮನೆಗೆ ಹೋದಾಗ ಆಕೆ ತನಗೆ ವಯಸ್ಸಾಗಿದೆ ತನ್ನ ಮಗನಿಗೆ ವೀಲು ನಾಮೆ ಬರೆಯಬೇಕು ಎಂದು ತಿಳಿಸಿದ್ದರು. ವೀಲು ನಾಮೆಯನ್ನು ಬರೆಯುವ ಮೊದಲು ಜಯಮ್ಮ ರವರು ತಾನು ಈ ಹಿಂದೆ ಸಹ ವೀಲು ನಾಮೆಯನ್ನು ಬರೆದಿದ್ದೇನೆ ಎಂಬ ವಿಚಾರವನ್ನು ನಮಗೆ ತಿಳಿಸಲಿಲ್ಲ. ಯಾವುದೇ ವಿಚಾರ ತಿಳಿಯದೇ ಇದ್ದರು ಸಹ D.W.2 ಪೂರ್ಣೇಶ್ ರವರು ತಯಾರಿಸಿದ ವೀಲು ನಾಮೆಗೆ ಸಹಿ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

16. ಈ ಕೇಸಿನಲ್ಲಿ ಸಾಕ್ಷಿ ಹೇಳಬೇಕು ಎಂದು ಯಾವಾಗ ಹೇಳಿದ್ದರು ಎಂದು

ಗೊತ್ತಿಲ್ಲ. ನನ್ನ ತಂದೆಯ ಹೆಸರು, ವಿಳಾಸವನ್ನು ಪ್ರತಿವಾದಿ 1(ಎ) ಹೇಮಾವತಿ ರವರಿಗೆ ತಿಳಿಸಿಲ್ಲ. ಪ್ರತಿವಾದಿ 1(ಎ) ಹೇಮಾವತಿ ಸಾಕ್ಷಿ ಹೇಳಬೇಕು ಎಂದು ನನ್ನನ್ನು ಕೇಳಿಲ್ಲ. D.W.2 ಪೂರ್ಣೇಶ್ ಮತ್ತು ಪ್ರತಿವಾದಿ 1(ಎ) ಹೇಮಾವತಿ ಶಾಮೀಲ್ ಆಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ